ಆ) ಈ ಖಾಸಗೀ ನರ್ಸಿಂಗ್ ಹೋಂಗಳಿಂದ ಸರ್ಕಾರಕ್ಕೆ ಏನಾದರೂ ತೆರಿಗೆ ಬರುತ್ತಿದೆಯೇ ?

ಇ) ಇಲ್ಲದಿದ್ದರೆ ಈ ಖಾಸಗೀ ನರ್ಸಿಂಗ್ ಹೋಂಗಳು ಜನರಿಂದ ಹಣವನ್ನು ಸುಲಿಗೆ ಮಾಡುತ್ತಿರುವುದರಿಂದ ಸರ್ಕಾರ ಈ ಖಾಸಗೀ ನರ್ಸಿಂಗ್ ಹೋಂಗಳ ಮೇಲೆ ತೆರಿಗೆ ವಿಧಿಸಲು ಕ್ರಮ ಕೈಗೊಳ್ಳುತ್ತದೆಯೇ ?

ಈ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—

ಆ) ಸರ್ಕಾರದಲ್ಲಿ ಈ ಮಾಹಿತಿ ಸಧ್ಯಕ್ಕೆ ಲಭ್ಯವಿರುವುದಿಲ್ಲ

ಆ) ಇಲ್ಲ

ಇ) ನೊಂದಣಿ ಶುಲ್ಕವನ್ನು ವಿಧಿಸುವ ವಿಷಯವು ಪರಿಶೀಲನೆಯಲ್ಲಿದೆ.

ಈ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ಹಸಿರು ಕಾರ್ಡುಗಳನ್ನು ಹೊಂದಿರುವವರ ಸಂಖ್ಯೆಯ ಬಗ್ಗೆ

೨೩೨) ಶ್ರೀ ನಾರಾಯಣಸ್ವಾಮಿ, (ಚೇತಮಂಗಲ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹಸಿರು ಕಾರ್ಡುಗಳನ್ನು ಹೊಂದಿರುವವರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಹಸಿರು ಕಾರ್ಡುಗಳಿಂದ ಪ್ರತಿ ವರ್ಷ ಸರ್ಕಾರಕ್ಕೆ ಎಷ್ಟು ಹಣ ವಿಚ್ರ್ಯು ಆಗುತ್ತಿದೆ.

ಇ) ಹಸಿರು ಕಾರ್ಡಿನ ಬಣ್ಣ ಬದಲಾಯಿಸಲು ಸರ್ಕಾರ ಯೋಚಿಸಿದೆಯೇ ?

ಈ) ಈ ಹಸಿರು ಕಾರ್ಡುಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದರ ಬಗ್ಗೆ ಸರ್ಕಾರಕ್ಕೆ ಏನಾದರೂ ದೂರುಗಳು ಬಂದಿದೆಯೆ ?

ಉ) ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)—

ಅ) ೩೧,೧೧,೩೯೫
(ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಲಾಗಿದೆ).

ಆ) ಹಸಿರು ಕಾರ್ಡಿಗೆ ೧೯೯೦-೯೧ನೇ ಸಾಲಿಗೆ ಆಯವ್ಯಯ ಪತ್ರದಲ್ಲಿ (ಬಜೆಟ್) ೪೧ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ವಿಚ್ರ್ಯು ಮಾಡಿರುವ ಮೊಬಲಗು ಈ ಕೆಳಕಂಡತೆ ಇರುತ್ತದೆ.

	ವೆಚ್ಚ ಕೋಟಿ ರೂ. ಗಳಲ್ಲಿ
೧೯೮೭-೮೮	೨೯.೬೦
೧೯೮೮-೮೯	೩೨.೫೦
೧೯೮೯-೯೦	೪೧.೯೮

ಇ) ಹೌದು

ಈ) ಬಂದಿವೆ

ಉ) ಹಸಿರು ಕಾರ್ಡುಗಳನ್ನು ದುರುಪಯೋಗಪಡಿಸಿಕೊಂಡಿರುವ ಅನರ್ಹ ಕುಟುಂಬಗಳನ್ನು ಪತ್ತೆ ಹಚ್ಚಿ ಸರಿ ಕಾರ್ಡುಗಳನ್ನು ವಜಾ ಮಾಡಲಾಗಿರುತ್ತದೆ. ಹಸಿರು ಕಾರ್ಡುಗಳನ್ನು ಅರ್ಹ ಕುಟುಂಬಗಳನ್ನು ಗುರ್ತಿಸಿ ಅಂತಹವರಿಗೆ ಈ ಮೊದಲು ರದ್ದಾದ ಹಸಿರು ಕಾರ್ಡುಗಳ ಸಂಖ್ಯೆಯನ್ನು ಮಿತಿಯಂತೆ ವಿತರಿಸಲಾಗುತ್ತಿದೆ. ಈ ವಿಷಯದಲ್ಲಿ ಸಂಬಂಧಪಟ್ಟವರಿಗೆ ನಿಯಮಿತವಾಗಿ ನಿರ್ದೇಶನಗಳನ್ನು ಹೊರಡಿಸಲಾಗುತ್ತಿದೆ. ಇಲ್ಲಿಯವರೆಗೆ ೩೫,೭೧೦ ಹಸಿರು ಕಾರ್ಡುಗಳನ್ನು ವಜಾಮಾಡಿ ೧೨,೪೦೫ ಕಾರ್ಡುಗಳನ್ನು ಅರ್ಹ ಕುಟುಂಬಗಳಿಗೆ ವಿತರಿಸಲಾಗಿರುತ್ತದೆ.

ANNEXURE

District-wise green card benefisheries.

Sl. No.	Name of the District		No. of green cards
1	Bangalore Urban	...	75,785
2	Bangalore Rural	...	1,43,608
3	Belgaum	...	2,10,081
4	Bellary	...	1.20,045
5	Bidar	...	83,267
6	Bijapur	...	1,98,165
7	Chickamagalur	...	1.04,044
8	Chitradurga	...	1,68·978
9	Dakshina Kannada	...	1,29.120
10	Dharwar	...	2,53 318
11	Gulbnarga	...	2.07·581
12	Hassan	...	1,33.867
13	Kodagu	...	55 484
14	Kolar	...	1,96,067
15	Mandya	...	1,52,243
16	Mysore	...	2.42,297
17	Raichur	...	1.73 137
18	Shimoga	...	1,39,733
19	Tumkur	...	2.23·671
20	Uttara Kannada	...	1:00,904
		Grand Total	31,11.395

ಶಾಸಕರ ಭವನದ ಆಲೋಪತಿ ಚಿಕಿತ್ಸಾ ವಿಭಾಗಕ್ಕೆ ಹೆಚ್ಚಿ ಹಣದ ಮಂಜೂರು ಮಾಡುವ ಬಗ್ಗೆ

೨೮೩. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಪೂಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ದಯವಿಟ್ಟು ಉತ್ತರಿಸುವರೆ.—

ಅ) ಶಾಸಕರ ಭವನದ ಆಲೋಪತಿ ಚಿಕಿತ್ಸಾ ವಿಭಾಗಕ್ಕೆ ೧೯೮೯-೯೦ ಮತ್ತು ಅದರ ನಂತರ ಬಜೆಟ್‌ನಲ್ಲಿ ನಿಗದಿಮಾಡಿದ ಹಣವೆಷ್ಟು? ಅದೇ ರೀತಿ ಆಯುರ್ವೇದಿಕ್ ಚಿಕಿತ್ಸಾ ವಿಭಾಗಕ್ಕೆ ತೆಗೆದಿರಿಸಿದ ಹಣವೆಷ್ಟು?

ಆ) ತೆಗೆದಿರಿಸಿದ ಹಣ ಸಾಕಾಗುತ್ತದೆಯೇ? ಹಣದ ಕೊರತೆಯಿಂದ ಅನೇಕ ರೀತಿಯ ಔಷಧಿಗಳು ಆಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇನ್ನೂ ಹೆಚ್ಚಿಗೆ ಹಣ ಮಂಜೂರು ಮಾಡಲಾಗುವುದೇ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು).—

ಅ) ಆಲೋಪತಿಕ್ ಆಯುರ್ವೇದಿಕ್

೧೯೮೯-೯೦	ರೂ. ೧,೫೦,೦೦೦	ರೂ. ೧೦,೦೦೦
೧೯೯೦-೯೧	ರೂ. ೧,೫೦,೦೦೦	ರೂ. ೧೦,೦೦೦